ಹೂವು ಚಂದ, ಹೂವಿನ ಬಣ್ಣ ಚಂದ, ಹೂವಿನ ನೋಟ ಚಂದ, ಹೂವಿನ ವಿನ್ಯಾಸ ಅಂದ, ಹೂವಿನ ಸೌಂದರ್ಯ ಇನ್ನೂ ಚಂದ. ಹೂವಿನ ಸುಗಂಧವಂತೂ ಪರಮಾನಂದ ಅಲ್ಲವೇ? ಹೂವು ಮಂಗಳಕರವಾದ ವಸ್ತು. ಪ್ರಕೃತಿ ಕಲ್ಪಿಸಿದ ಅದ್ಭುತ ಕೊಡುಗೆ. ಹೂವಿನ ಬಳಕೆಯನ್ನು ನೋಡುತ್ತಾ ಹೋದರೆ ಸುಗಂಧ ದ್ರವ್ಯ, ಸಿಹಿ ತಿನಿಸುಗಳಿಗೆ, ಅಲಂಕಾರಕ್ಕೆ, ಪೂಜೆ ಪುನಸ್ಕಾರಗಳಿಗೆ... ಯಾವುದೇ ಶುಭ ಆಚರಣೆಗೆ ಹೂವು ಅತ್ಯಗತ್ಯ. ಅಷ್ಟೊಂದು ಪ್ರಾಮುಖ್ಯತೆಯನ್ನು ಹೊಂದಿದೆ ಈ ಸುಕೋಮಲ ಹೂವುಗಳು.



ಹೂವಿನ ವಿನ್ಯಾಸದ ಆಭರಣಗಳು ಆಕರ್ಷಕ. ಯುವತಿಯರ ಮೆಚ್ಚು, ಮಹಿಳೆಯರ ಪ್ರೀತಿ. ಹಿಂದೆ ತ್ರೇತಾಯುಗ, ದ್ವಾಪರ ಯುಗಗಳಲ್ಲಿ ನೈಜ ಹೂವನ್ನೇ ಕಿವಿಯೋಲೆಯಾಗಿ, ತಲೆಯ ಆಭರಣವಾಗಿ, ಕೈಯ ಆಭರಣವಾಗಿ ಧರಿಸುತ್ತಿದ್ದರು. ಇಂದು ಫ್ಯಾಷನ್ ಆಗಿಯೂ ಈಗಿನ ನವ ತರುಣಿಯರಿಂದ ಹಿಡಿದು ಮಹಿಳೆಯರು, ಮಕ್ಕಳು ನೈಜ ಹೂವನ್ನು ಆಭರಣವಾಗಿ ಧರಿಸುತ್ತಾರೆ. ಇದೀಗ ಹೂವಿನ ವಿನ್ಯಾಸವನ್ನು ಲೋಹಗಳಲ್ಲಿ ತಯಾರಿಸಿ ಧರಿಸುತ್ತಾರೆ. ಅದು ಹೊಳಪಿನಿಂದ ಕೂಡಿದ್ದು ಬಹು ಮನೋಹರವಾಗಿ ಕಾಣುತ್ತದೆ. ಹೂಗಳ ವಿನ್ಯಾಸದ ಆಭರಣ ವಿಶಿಷ್ಟ ಲುಕ್ ನೀಡುವುದರಿಂದ ಹೂಗಳ ಆಭರಣ ಈಗ ಫ್ಯಾಷನ್ ಟ್ರೆಂಡ್ ಕೂಡ ಆಗಿದೆ.

## ಸೇವಂತಿಗೆ ದಳದ ವಿನ್ಯಾಸ

ಸೇವಂತಿಗೆ ಹೂವಿನಲ್ಲಿ ಹಲವು ವೈವಿಧ್ಯವಿದೆ. ಇದರ ಉಪಯೋಗವೂ ಹೆಚ್ಚು. ಆಭರಣ ವಿನ್ಯಾಸವೂ ಅಷ್ಟೆ. ಹೆಚ್ಚು ದಳದ ಸಣ್ಣ ಎಸಳಿನ, ಸ್ವಲ್ಪ ಅಗಲದ ಎಸಳಿನ ದೊಡ್ಡ ಸೇವಂತಿಗೆ, ದಪ್ಪ ಎಸಳಿನ ದಪ್ಪ ಸೇವಂತಿಗೆ, ಕಡಿಮೆ ಎಸಳಿನ ತೆಳ್ಳಗಿನ ಎರಡು ಸುತ್ತಿನ ಸೇವಂತಿಗೆ... ಹೀಗೆ ಹಲವಾರು ವಿಧಗಳಿವೆ. ನಮ್ಮ ಬಜೆಟ್ ನೋಡಿಕೊಂಡು ಆಯ್ಕೆ ಮಾಡಬಹುದು. ಉದಾ: ಪೆಂಡೆಂಟ್ ಆದರೆ ದಪ್ಪ ಎಸಳುಗಳ ದೊಡ್ಡ ಸೇವಂತಿಗೆ ವಿನ್ಯಾಸ ಉತ್ತಮ. ಏಕೆಂದರೆ ಪೆಂಡೆಂಟ್ ಸ್ವಲ್ಪ ದೊಡ್ಡದಾಗಿದ್ದರೆ ಚೆಂದ. ಕಿವಿಯೋಲೆ ಆಕಾರದಲ್ಲಿ ಸ್ವಲ್ಪ ಸಣ್ಣದಾಗಿರಲಿ. ಎಸಳುಗಳು ತುಂಬಾ ಚೂಪಾಗಿ ಮೂಡಿದಲ್ಲಿ ಸ್ವಲ್ಪ ಚುಚ್ಚುವ ಸಾಧ್ಯತೆ ಇದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಅಂದವಾಗಿ ಕಾಣುವಂತೆ ಎಸಳುಗಳು ಒಂದರ ನಂತರ ಒಂದು ಒಪ್ಪವಾಗಿ ಇರುವಂತೆ ಮಧ್ಯದಲ್ಲಿ ಕುಸುಮವು ಇರುವ ಹಾಗೆ ವಿನ್ಯಾಸಗೊಳಿಸಬಹುದು. ಅಥವಾ ಕುಸುಮದ ಜಾಗದಲ್ಲಿ ಒಂದು ಹರಳನ್ನು ಹಾಕಿದರೆ ಅಂದ. ಇದು ತುಂಬಾ ಪ್ರಸಿದ್ಧವಾದ ವಿನ್ಯಾಸ.



ಇದರಲ್ಲಿ 2, 3 ಸೇವಂತಿಗೆ ಹೂವನ್ನು ಚಿನ್ನದ ಸರಿಗೆಯಲ್ಲಿ ಪೋಣಿಸಿ ಬ್ರೇಸ್ಲೆಟ್, ಚೋಕರ್ ಅನ್ನು ಮಾಡಬಹುದು. ಉಂಗುರಕ್ಕೂ ಒಂದು ಸೇವಂತಿಗೆ ಬಳಸಿ ಧರಿಸಬಹುದು. ಇದು ಯುವತಿಯರಿಗೆ, ಮಹಿಳೆಯರಿಗೆ 'ರಾಣಿಯ ಕಳೆ' ಬರುವಂತೆ ಮಾಡುತ್ತದೆ. ಬೆರಳುಗಳಿಗೆ ಕುತ್ತಿಗೆಗೆ ಅದ್ಭುತ ಸೊಬಗೂ ಕೊಡುತ್ತದೆ.

## ಗುಲಾಬಿ ಹೂಗಳ ಸೊಬಗು

ಗುಲಾಬಿ ಹೂವಿನ ವಿನ್ಯಾಸ ಸಾಧಾರಣವಾಗಿ ಕಿವಿಯೋಲೆಗೆ ಬಹಳ ಚಂದ. ಇದರ ದಳಗಳು ಬಿಡಿ ಬಿಡಿಯಾಗಿ ಕಾಣುವಂತೆ ವಿನ್ಯಾಸಗೊಳಿಸಿರಬೇಕು. ಹವಳದಲ್ಲಿ, ಹೂವಿನ ವಿನ್ಯಾಸವನ್ನು ಕೆತ್ತಲಾಗುತ್ತದೆ, ಅದು ಕಣ್ಮನ ಸೆಳೆಯುತ್ತದೆ. ಪೆಂಡೆಂಟ್‌ಗೆ ಒಂದು ತೆಳ್ಳಗಿನ ಸರವನ್ನು ಹಾಕಿ ಧರಿಸಿದಲ್ಲಿ ಒಡವೆಯ ಅಂದ ಇನ್ನೂ ಹೆಚ್ಚುತ್ತದೆ. ಕಡ ಬಳೆಯಲ್ಲಿ ಮಧ್ಯದಲ್ಲಿ ಹೂವನ್ನು ಜೋಡಿಸಬಹುದು. ಹವಳವಾದರೆ ಕೆಂಪು, ಟರ್ಕ್ವಯಿಸ್ ಆದರೆ ನೀಲಿ, ಮದರ ಪರ್ಲ್ ಆದರೆ ಬಿಳಿ ಗುಲಾಬಿ ವಿನ್ಯಾಸ ಚೆನ್ನಾಗಿ ಕಾಣುತ್ತದೆ.

## ಮಲ್ಲಿಗೆ ನೆಕ್ಲೇಸ್

ಸಾಧಾರಣವಾಗಿ ಮಲ್ಲಿಗೆ ಹೂವನ್ನು ಬಾಳೆಯ ನಾರಿನಿಂದ ಹೆಣೆದು ಮಾಲೆ ಮಾಡಿದಂತೆ ಚಿನ್ನದ ಸರಿಗೆಯಲ್ಲಿ ಚಿನ್ನದ ಮಲ್ಲಿಗೆಯನ್ನು ಪೋಣಿಸಿ ನೆಕ್ಲೇಸ್ ಮಾಡಲಾಗುತ್ತದೆ. ಮಲ್ಲಿಗೆ ಮೊಗ್ಗುಗಳನ್ನು ಹೆಣೆದಂತೆ ಚಿನ್ನದಲ್ಲಿ ಮಾಡಿದ ನೆಕ್ಲೇಸ್ ಆ್ಯಂಟಿಕ್ ಲುಕ್ ಕೊಡುತ್ತದೆ. ಈ ಆಭರಣ ಚೂಡಿದಾರ ಆಗಲಿ, ಸೀರೆಯಾಗಲಿ ರವಿಕೆಯ ನೆಕ್ ಡಿಸೈನ್‌ನ ಮೇಲೆ ಕೂರುವಂತೆ ಹಿಂದೆ ರಿಂಗ್ ಚೈನ್ ಇರಲಿ, ಅದು ನಮ್ಮ ಕುತ್ತಿಗೆ ಅಳತೆಗೆ ಸರಿ ಹೊಂದುವಂತೆ ಟೈಟ್ ಮಾಡಬೇಕು, ಆಗಲೇ ಸೊಗಸು. ಮಲ್ಲಿಗೆ ಮೊಗ್ಗಿನ ತುದಿ ಚೂಪಾಗಿದ್ದು ಮೇಲೆ ಒಂದು ರೂಬಿ, ಎಮರಾಲ್ಡ್ ಹರಳನ್ನು ಅಳವಡಿಸಬಹುದು. ಸೀರೆಗೆ ಸರಿಹೊಂದುವ ಬಣ್ಣ ಹೊಂದಿಸಿಕೊಂಡು ಧರಿಸಿದರಾಯಿತು. ಸಾಂಪ್ರದಾಯಿಕ ಕಾರ್ಯಕ್ರಮಗಳಿಗೆ ಹೇಳಿ ಮಾಡಿಸಿದ ಆಭರಣ.

## ಕೇದಗೆ ವಿನ್ಯಾಸ



ಇದೊಂದು ಬಲು ಅಪರೂಪದ ಹೂವು. ಬಹಳ ಪರಿಮಳ, ಹಳದಿ ಬಣ್ಣ ಇದ್ದು ಸಾಧಾರಣ ತಲೆಯ ಆಭರಣವಾಗಿ ಇದನ್ನು ವಿನ್ಯಾಸಕ್ಕೆ ಬಳಸುತ್ತಾರೆ. ಹಿಂದೆ ರಾಣಿಯರು ಚಿನ್ನದ ಕೇದಗೆ ಹೂವನ್ನು ತುರುಬು ಕಟ್ಟಿ ಮೇಲೊಂದು ಹೂ ಮುಡಿಯುತ್ತಿದ್ದರು. ಅದು ಒಪ್ಪವಾಗಿ ಜುಟ್ಟಿನ ಮೇಲೆ ಕೂರುತ್ತಿತ್ತು.

ಹೂವುಗಳನ್ನು ಒಂದಕ್ಕೊಂದು ಪೋಣಿಸಿ ಹಾರಮ್ ಮತ್ತು ಲಾಂಗ್ ನೆಕ್ಲೇಸ್ ಮಾಡಿದಲ್ಲಿ ಅದನ್ನು ದೇವರಿಗೆ ಪೂಜೆ ಮಾಡುವಾಗ ಅಲಂಕಾರಕ್ಕೆ ಬಳಸಬಹುದು. ಎಲ್ಲಾ ಹೂವಿನ ವಿನ್ಯಾಸದ ತುರುಬಿನ ಆಭರಣ ತುಂಬಾ ಫೇಮಸ್. ಹೂವಿನ ಹಾರದ ಕೊನೆಯಲ್ಲಿ ಒಂದು ಉದ್ದಗಿನ ಯು ಪಿನ್ ತರದ್ದು ಇದ್ದಲ್ಲಿ ತುರುಬಿಗೆ ಸಿಕ್ಕಿಸಲು ಸುಲಭ ಗಟ್ಟಿಯಾಗಿ ನಿಲ್ಲುತ್ತದೆ.

ಭರತನಾಟ್ಯ, ಒಡಿಸ್ಸಿ, ಕಥಕ್ ನೃತ್ಯದಲ್ಲಿ ಮಲ್ಲಿಗೆ ತಲೆಯ ಆಭರಣ ಬಹಳ ಸುಂದರವಾಗಿರುತ್ತದೆ. ಇದೇ ತಲೆಯ ಆಭರಣಕ್ಕೆ ಎರಡು ಹುಕ್ ಇದ್ದಲ್ಲಿ ಅದಕ್ಕೆ ಚೈನ್ ಸಿಕ್ಕಿಸಿ ಕೊರಳಿಗೆ ಹಾರವಾಗಿ ಧರಿಸಬಹುದು. ಸಣ್ಣ ದಪ್ಪಗಿನ ಚೈನ್ ದರಿಸಿದಲ್ಲಿ ನೆಕ್ಲೇಸ್ ಆಗಿ ಕೊರಳ ಶೋಭೆ ಹೆಚ್ಚುತ್ತದೆ. ಒಂದೇ ಆಭರಣವನ್ನು ಇಂದು ತಲೆಯ ಆಭರಣ, ಕೊರಳ ಆಭರಣ, ಕೈಯ ಆಭರಣವಾಗಿ ಸೊಗಸಾಗಿ ಹೊಸ ರೂಪ ಕೊಟ್ಟು ಬಳಸುವುದು ನಮ್ಮ ಚೈತನ್ಯ.

ಸ್ತ್ರೀ ದೈವೀ ಸ್ವರೂಪ, ಸ್ತ್ರೀ ಶಕ್ತಿ ವೃದ್ಧಿಸಬೇಕಾದಲ್ಲಿ ಆಭರಣ (ಲೋಹ) ಅತ್ಯಗತ್ಯ. ನಮ್ಮ ನಕಾರಾತ್ಮಕ ಯೋಚನೆಗಳನ್ನು ದೂರಮಾಡಿ ಸಕಾರಾತ್ಮಕ ಚಿಂತನೆಗಳು ವೃದ್ಧಿಸುವಂತೆ ಮಾಡುವ ಶಕ್ತಿ ಲೋಹಗಳ ರಾಜ ಬಂಗಾರಕ್ಕಿದೆ ಇದು ನಿತ್ಯ ಸತ್ಯ.